**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನಗಿರಿ.**

**ಸಿಸಿ ನಂ:1085/2026**

**ಪಿರ್ಯಾದುದಾರರು** **ವಿರುದ್ಧ** **ಆರೋಪಿತರು :**

ಸಂತೆಬೆನ್ನೂರು ಪೊಲೀಸ್ ಠಾಣೆ

1. ಹನುಮಂತ
ಬಿನ್ ಚಂದ್ರಪ್ಪ,
ವಯಸ್ಸು: 34 ವರ್ಷ,

2. ಮನು
ಬಿನ್ ಕುಮಾರ ಸ್ವಾಮಿ,
ವಯಸ್ಸು: 37 ವರ್ಷ,

3. ಕೊಡ್ಯೆರ ಮಾರುತಿ
ಬಿನ್ ಭೀರಪ್ಪ,
ವಯಸ್ಸು: 33 ವರ್ಷ,

4. ಅಂಜಿನಪ್ಪ ಡಿ.ಕೆ.
ಬಿನ್ ಹನುಮಂತಪ್ಪ,
ವಯಸ್ಸುಃ 38 ವರ್ಷ,
ಎಲ್ಲರೂ ವಾಸಃ ಮರಡಿ ಗ್ರಾಮ,
ಚನ್ನಗಿರಿ ತಾಲ್ಲೂಕು.

ಶ್ರೀ.ವಜ್ರೇಶ ಬಿ.ಎ. ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ ಆದ ನಾನು ಈ ಮೇಲ್ಕಂಡ ಆರೋಪಿತರ ಪರ ವಕೀಲರಾದ ನಿಮ್ಮನ್ನು ಈ ಕೆಳಕಂಡ ಆರೋಪಣೆಗೆ ಗುರಿಪಡಿಸುತ್ತೇನೆ.

**ಆಪಾದನೆ**

ದಿನಾಂಕಃ 19.03.2026 ರಂದು ರಾತ್ರಿ 10.10 ರಿಂದ 11.00 ಗಂಟೆಯ ಮಧ್ಯದ ಅವಧಿಯಲ್ಲಿ ಚನ್ನಗಿರಿ ತಾಲ್ಲೂಕು, ಸಂತೆಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯ ಮರಡಿ ಗ್ರಾಮದ ಬಸ್ ನಿಲ್ದಾಣದ ಬಳಿ ಸಾರ್ವಜನಿಕ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ಕಾನೂನು ಬಾಹಿರವಾಗಿ ಅಂದರ್–ಬಾಹರ್ ಇಸ್ಪೀಟ್ ಜೂಜಾಟ ಆಡುತ್ತಿದ್ದಾಗ ಸಿಕ್ಕಿ ಹಾಕಿಕೊಳ್ಳುವ ಮೂಲಕ ನೀವು 87 ಕೆ.ಪಿ. ಆಕ್ಟ್ ರ ಮೇರೆಗೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವಿರಿ?

1. ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದೆನೆಯನ್ನು ಕೇಳಿದ್ದೀರಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಆರೋಪಿತರ ಪರವಾಗಿ ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತರ ವಕೀಲರಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 08.06.2026 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

**ಸ್ಥಳಃ ಚನ್ನಗಿರಿ**

**ದಿನಾಂಕಃ 08.06.2026**

ಸಹಿ/-

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಲಯ, ಚನ್ನಗಿರಿ.**

ಆರೋಪಿತರ ಪರ ವಕೀಲರು